ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೫೬	ಬೆಂಗಳೂರು, ಸೋಮವಾರ, ೦೧, ಫೆಬ್ರವರಿ, ೨೦೨೧ (ಮಾಘ, ೧೨, ಶಕವರ್ಷ, ೧೯೪೨)	ಸಂಚಿಕೆ ೫
Volume - 156	BENGALURU, MONDAY, 01, FEBRUARY, 2021 (Magha, 12, SHAKAVARSHA, 1942)	Issue 5

ಭಾಗ ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಆಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು

ಕರ್ನಾಟಕ ವಿಧಾನ ಪರಿಷತ್ತು

ಸಂಖ್ಯೆ:ಕವಿಪ:ಶಾರಶಾ:ಉಸಚು:1407/2021

ವಿಧಾನ ಪರಿಷತ್ತಿನ ಸಚಿವಾಲಯ,
ಅಂಚೆ ಪಟ್ಟಿಗೆ ಸಂಖ್ಯೆ: 5079, ವಿಧಾನ ಸೌಧ,
ಬೆಂಗಳೂರು–560 001, ದಿನಾಂಕ:29.01.2021.

ಅ ಧಿ ಸೂ ಚ ನೆ

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ **ಶ್ರೀ ಎಂ.ಕೆ. ಪ್ರಾಣೇಶ್** ಅವರು, **29ನೇ ಜನವರಿ, 2021ರಂದು** ವಿಧಾನ ಪರಿಷತ್ತಿನ **ಉಪ ಸಭಾಪತಿಯವರಾಗಿ** ಚುನಾಯಿತರಾಗಿರುತ್ತಾರೆ.

(ಕೆ. ಆರ್. ಮಹಾಲಕ್ಷ್ಮಿ)
ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

KARNATAKA LEGISLATIVE COUNCIL

No.KLC/Legn/DCE/1407/2021

Legislative Council Secretariat,
P.B.No.5079, Vidhana Soudha,
Bangalore-560 001, dated : 29.01.2021

N O T I F I C A T I O N

Sri M.K. Pranesh, Hon'ble Member of Karnataka Legislative Council has been elected as **Deputy Chairman**, Karnataka Legislative Council on **29th January, 2021.**

(K.R.Mahalakshmi)
Secretary,
Karnataka Legislative Council

PR-33

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 48 ಸೇಲೋಆ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ: 19/01/2021

ಅಧಿಸೂಚನೆ

ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮ, 1978(1990ರ ಕರ್ನಾಟಕ ಅಧಿನಿಯಮ 14) 8ನೇ ಪ್ರಕರಣದೊಂದಿಗೆ ಓದಲಾದಂತೆ, 3ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ರಚಿಸಲು ಉದ್ದೇಶಿಸಿರುವಂಥ ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್‌ಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳು, 1997ಕ್ಕೆ ಮತ್ತಷ್ಟು ತಿದ್ದುಪಡಿ ಮಾಡುವ ಸಲುವಾಗಿ ಈ ಕೆಳಗಿನ ನಿಯಮಗಳ ಕರಡನ್ನು, ಸದರಿ ಅಧಿನಿಯಮದ 3ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎ) ಖಂಡದ ಮೂಲಕ ಅಗತ್ಯಪಡಿಸಲಾದಂತೆ ಇದರಿಂದ ಬಾಧಿತರಾಗುವ ಸಂಭವವಿರುವ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ, ಈ ಮೂಲಕ ಪ್ರಕಟಿಸಲಾಗಿದೆ ಮತ್ತು ಸದರಿ ಕರಡನ್ನು ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಹದಿನೈದು ದಿನಗಳ ನಂತರ ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ಸೂಚಿಸಲಾಗಿದೆ.

ಸದರಿ ಕರಡಿಗೆ ಸಂಬಂಧಪಟ್ಟಂತೆ ಮೇಲೆ ಗೊತ್ತುಪಡಿಸಿದ ಅವಧಿ ಕೊನೆಗೊಳ್ಳುವ ಮುಂಚೆ ಯಾರೇ ವ್ಯಕ್ತಿಯಿಂದ ರಾಜ್ಯ ಸರ್ಕಾರವು ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಅಥವಾ ಸಲಹೆಯನ್ನು ರಾಜ್ಯ ಸರ್ಕಾರವು ಪರಿಗಣಿಸುತ್ತದೆ. ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನ ಸೌಧ, ಬೆಂಗಳೂರು-560001 ಇವರಿಗೆ ಸಲ್ಲಿಸತಕ್ಕದ್ದು.

ಕರಡು ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ**- (1) ಈ ನಿಯಮಗಳನ್ನು, ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್‌ಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) (ತಿದ್ದುಪಡಿ) ನಿಯಮಗಳು, 2020 ಎಂದು ಕರೆಯತಕ್ಕದ್ದು.

(2) ಅವು ರಾಜ್ಯಪತ್ರದಲ್ಲಿ ಅಂತಿಮವಾಗಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಅನುಸೂಚಿ IIರ ತಿದ್ದುಪಡಿ:** ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್‌ಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ನೇಮಕಾತಿ) ನಿಯಮಗಳು, 1997ರಲ್ಲಿನ ಅನುಸೂಚಿ IIರ "ಪ್ರಕರಣ 1 ಪರೀಕ್ಷಾ ಯೋಜನೆ" ಶೀರ್ಷಿಕೆ ಅಡಿಯಲ್ಲಿನ **"(ಎ) ಪ್ರಿಲಿಮ್‌ನರಿ ಪರೀಕ್ಷೆ"** ಎಂಬ ಉಪಶೀರ್ಷಿಕೆಯ ಟಿಪ್ಪಣಿಯಲ್ಲಿ ಬರುವ ಸಿ

ಬಾಬುವಿನಲ್ಲಿರುವ '20' ಎಂಬ ಅಂಕಿಯ ಬದಲಿಗೆ "15" ಎಂಬ ಅಂಕಿಗಳು ಮತ್ತು ಪದವನ್ನು ಪ್ರತ್ಯಾಯೋಜಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

(ನಾಗಪ್ಪ ಎಸ್ ಪರೀಟ್)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಸಿಆಸುಇ (ಸೇವೆಗಳು–7

GOVERNMENT OF KARNATAKA

No: DPAR 48 SeLoAa 2019

Karnataka Government Secretariat,
Vidhana Soudha,
Bangalore, dated:19.01.2021.

NOTIFICATION

The draft of the following rules further to amend the Karnataka Recruitment of Gazetted Probationers (Appointment by Competitive Examinations) Rules, 1997 which the Government of Karnataka proposes to make in exercise of the powers conferred by sub-section (1) of section 3 read with section 8 of the Karnataka State Civil Services Act, 1978 (Karnataka Act 14 of 1990), is hereby published as required by clause (a) of sub-section (2) of section 3 of the said Act for the information of all persons likely to be affected thereby and notice is hereby given that the said draft will be taken into consideration after fifteen days from the date of its publication in the Official Gazette.

Any objection or suggestion which may be received by the State Government from any person with respect to the said draft before the expiry of the period specified above will be considered by the Government. Objections or Suggestions may be addressed to the Secretary to Government, Department of Personal and Administrative Reforms, Vidhana Soudha, Bangalore-560001.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

DRAFT RULES

1. Title and commencement- (1) These rules may be called the Karnataka Recruitment of Gazetted Probationers (Appointment by Competitive Examinations) (Amendment) Rules, 2020.

(2) They shall come into force from the date of their final publication in the official Gazette.

2. Amendment of Schedule II: In the Karnataka Recruitment of Gazetted Probationers (Appointment by Competitive Examinations) Rules, 1997, in Schedule II, Under the heading "**Section I** SCHEME OF EXAMINATION", in the sub-heading **"(A) Preliminary Examination", u**nder the Note, in item **C**, for the figure **'20'** the figures and word **"15"** shall be substituted.

By Order and in the name of the
Governor of Karnataka

(Nagappa S Pareet)
Under Secretary to Government(I/C)
Department of Personnel and
Administrative Reforms (Services 7)

PR-34

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು.

SUNIL GARDE Digitally signed by SUNIL GARDE Date: 2021.02.02 18:58:40 +05'30'